
# ಬೆಳಕಿನ ಸಂಚಲನ

ಸಂಪುಟ 3, ಸಂಚಿಕೆ 10

ಫೆಬ್ರುವರಿ 2016



## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಅವರ 8ನೇ ಫೆಬ್ರುವರಿ 2009ರ ಭಾಷಣದ ಆಯ್ದ ಭಾಗಗಳು)

**ಅನು: ಶ್ರೀದೇವಿ**

ಅದೇ ಹಳೆಯ ವಿಷಯಗಳಿಗೆ, ಹೊಸ ಸವಾಲುಗಳು ಹಾಗೂ ಹೊಸ ಆಯಾಮಗಳು ಬಂದಿರುವುದರ ಕಾರಣ ಈ ಕಾಲ ಬಹಳ ಸವಾಲಿನ ಹಾಗೂ ಕಷ್ಟದ ಸಮಯಗಳಾಗಿದ್ದರೂ ಅದು ರೋಮಾಂಚಕಾರಿಯೂ ಆಗಿದೆ. ಮಹತ್ವದ ಬದಲಾವಣೆಗಳು ಉಂಟಾಗುತ್ತಿವೆ. ಕೆಲವೊಂದು ಅನುಭವಕ್ಕೆ ಬಂದಿವೆ, ಅವು ಗೋಚರಿಸುತ್ತಿವೆ. ಕೆಲವೊಂದು ಇನ್ನೂ ಗೋಚರಿಸುತ್ತಿಲ್ಲ. ಹೊಸ ವ್ಯವಸ್ಥೆಗಳು ಹುಟ್ಟುತ್ತಿವೆ. ಆದ ಕಾರಣ ಈ ಪ್ರಪಂಚವು ಹೊಸ ಯುಗಕ್ಕೆ ಕಾಲಿಡುವುದನ್ನು ನೋಡುವುದು ಬಹಳ ರೋಮಾಂಚಕವಾಗಿದೆ. ಇದು ಒಂದೇ ಸಲಕ್ಕೆ ಸಂಭವಿಸುವುದಿಲ್ಲ. ಇದು ಕ್ರಮೇಣವಾಗಿ ಸಂಭವಿಸುತ್ತದೆ. ಇದು ಸಂಭವಿಸುತ್ತಿದೆ. ಆದರೆ ಈ ಸಮಯದಲ್ಲಿ ಬಹಳಷ್ಟು ಕ್ಷೋಭೆಗಳುಂಟಾಗುತ್ತವೆ. ಆಧ್ಯಾತ್ಮಿಕ ವ್ಯಕ್ತಿಯು ಇದನ್ನು ಸಾಕ್ಷಿ ಭಾವದಿಂದ ನೋಡುತ್ತಾನೆ. ಅವನು ಈ ಕ್ಷೋಭೆಗಳ ಜೊತೆಗೂಡುವುದಿಲ್ಲ. ಅವನು ಬೆಳಕಿನೊಂದಿಗೆ ಶ್ರುತಿಗೊಂಡಿರುತ್ತಾನೆ.

ನಾವು ಬೆಳಕಿನೊಂದಿಗೆ ಶ್ರುತಿಗೊಳ್ಳಬೇಕೇ ವಿನಹ ಮಾನಸಿಕವಾಗಿಯೂ ಕೂಡ ಕ್ಷೋಭೆಗಳೊಂದಿಗೆ ಶ್ರುತಿಗೊಳ್ಳಬಾರದು. ಕ್ಷೋಭೆಗಳೊಂದಿಗೆ ಶ್ರುತಿಗೊಂಡಿದ್ದೇ ಆದರೆ, ಗೊಂದಲಕ್ಕೆ ಸಿಲುಕುತ್ತೇವೆ, ದಾರಿ ತಪ್ಪುತ್ತೇವೆ, ಚಿತ್ತಸ್ವಾಸ್ಥ್ಯವನ್ನು ಕಳೆದುಕೊಳ್ಳುತ್ತೇವೆ. ಚಿತ್ತಸ್ವಾಸ್ಥ್ಯದಿಂದ ಇರುವುದೂ ಆಧ್ಯಾತ್ಮಿಕತೆ. ವಿವೇಕದಿಂದ ಜೀವನ ನಡೆಸುವುದು, ಅದೇ ರೀತಿಯಲ್ಲಿ ಇತರರೂ ಜೀವನ ನಡೆಸಲು ಅವಕಾಶ ಮಾಡಿಕೊಡುವುದೂ ಆಧ್ಯಾತ್ಮಿಕತೆಯ ಒಂದು ಭಾಗ. ಬೆಳಕಿನೊಂದಿಗೆ ನಾವು ಶ್ರುತಿಗೊಂಡಾಗ ನಮ್ಮಲ್ಲಿ ಎಲ್ಲವೂ ಸರಿಯಿರುತ್ತದೆ, ನಾವು ಬೆಳಕನ್ನು ಕೂಡ ಹರಡಬಹುದು. ಅದನ್ನೇ ನಾವು ಮಾಡಲು ಪ್ರಯತ್ನಿಸುತ್ತಿರುವುದು. ಲೈಟ್ ಚಾನಲ್ಸ್ ಸಂಚಲನವಿರುವುದು ಶಾಂತಿ, ವಿವೇಕ ಹಾಗೂ ಪ್ರೀತಿಯನ್ನು ಹರಡುವುದಕ್ಕಾಗಿ. ಆದುದರಿಂದ ನಾವು ಯಾವಾಗಲೂ ಬೆಳಕಿನೊಂದಿಗೆ ಶ್ರುತಿಗೊಂಡಿರೋಣ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಈ ಭೂಮಿಯ ಮೇಲೆ ಹೊಸ ಯುಗವನ್ನು ತರುವ ಪ್ರಕ್ರಿಯೆಗಳಲ್ಲಿ ಜನರು ಭಾಗವಹಿಸಲು ಲೈಟ್ ಚಾನಲಿಂಗ್ ಒಂದು ಅತ್ಯುತ್ತಮವಾದ ಅವಕಾಶ. ಹೆಚ್ಚು ಪ್ರೀತಿ ಮತ್ತು ಶಾಂತಿಯನ್ನು ಈ ಭೂಮಿಯ ಮೇಲೆ ತರುವ ಪರಿಶುದ್ಧವಾದ ಉದ್ದೇಶವನ್ನು ಮಾತ್ರ ಇದು ಬಯಸುತ್ತದೆ. ಈ ಸದ್ದಿಲ್ಲದ ಹಾಗೂ ಶಾಂತಿಯುತವಾದ ಪ್ರಕ್ರಿಯೆಯ ಮೂಲಕ ಜೀವನವನ್ನು ಉತ್ತಮಪಡಿಸಿಕೊಳ್ಳಬೇಕೆನ್ನುವ ನಮ್ಮ ಉದ್ದೇಶವನ್ನು ಬಲಗೊಳಿಸಲು ಪ್ರತಿ ವಿಶ್ವ ಚಾನಲ್ಸ್ ದಿನವೂ ಸಹಾಯ ಮಾಡುತ್ತದೆ.

ಅನುಗ್ರಹ ಮತ್ತು ಸಮೃದ್ಧಿಯಿಂದ ಕೂಡಿದ ಬೆಳಕು ಲೈಟ್ ಚಾನಲ್‌ಗಳ ಮೂಲಕ ಕೆಳಗೆ ಬಂದು ಹರಿಯಲು ಕಾಯುತ್ತಿರುತ್ತದೆ. ವಿಶ್ವ ಚಾನಲ್ಸ್ ದಿನದಂದು ಪರಿಶುದ್ಧವಾದ ಉದ್ದೇಶಗಳು ಒಟ್ಟಿಗೆ ಸೇರಿದ ಪ್ರತಿ ಬಾರಿಯೂ ಇದು ದ್ವಿಗುಣಗೊಳ್ಳುತ್ತದೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ವಿಶ್ವ ಚಾನಲ್ಸ್ ದಿನವು ನಮ್ಮ ಎಲ್ಲಾ ಕಾರ್ಯಕರ್ತರಿಗೆ ಬಹಳ ಸಂತೋಷ ಮತ್ತು ತೃಪ್ತಿಯನ್ನು ತಂದಿದೆ. ಇಡೀ ದಿನ ನಾವು ದೈವಾನುಗ್ರಹ ಹಾಗೂ ಶಾಂತಿಯನ್ನು ಅನುಭವಿಸಿದೆವು. ಉನ್ನತವಾದ ಉದ್ದೇಶಕ್ಕಾಗಿ ನಾವು ಕೆಲಸ ಮಾಡಿದಾಗಲೆಲ್ಲಾ ವಿಶ್ವವು ಕೂಡ ತನ್ನ ಪ್ರೀತಿ ಮತ್ತು ಅನುಗ್ರಹದ ಮಳೆಯನ್ನು ಸುರಿಸುತ್ತದೆ. ಪವಾಡದಂತಹ ಸಹಾಯಗಳು ದಿನವಿಡೀ ದೊರೆತವು. ಮಾಸ್ಟರ್‌ಗಳ ಅನುಗ್ರಹದಿಂದ 6ನೇ ವಿಶ್ವ ಚಾನಲ್ಸ್ ದಿನವು ಸುಸೂತ್ರವಾಗಿ ನಡೆಯಿತು ಹಾಗೂ ಬಹಳ ಯಶಸ್ವಿಯಾಯಿತು.

ಈ ಕೆಲಸದ ಬಗ್ಗೆ ನಮ್ಮ ಕಾರ್ಯಕರ್ತರಿಗಿರುವ ಪ್ರೀತಿ ಮತ್ತು ಸಮರ್ಪಣೆ ಯಾವಾಗಲೂ ನನ್ನ ಮನಮುಟ್ಟುತ್ತದೆ. ಅವರು ಒಂದು ವಿಶೇಷವಾದ ಉಡುಗೊರೆಯನ್ನು ಮಹರ್ಷಿ ಅಮರರವರಿಗೆ ಅವರ ಹುಟ್ಟುಹಬ್ಬದಂದು ಅರ್ಪಿಸಿದ್ದಾರೆ. ಎಲ್ಲಾ ಶಾಲೆಗಳ ಆಡಳಿತವರ್ಗ, ಶಿಕ್ಷಕರು ಹಾಗೂ ಮಕ್ಕಳಿಗೆ ಅವರ ಸಹಕಾರಕ್ಕಾಗಿ ನಾವು ಕೃತಜ್ಞರಾಗಿದ್ದೇವೆ. ಅವರು ಯಾವಾಗಲೂ ನಮಗೆ ಬೆಂಬಲ ಮತ್ತು ಉತ್ತೇಜನವನ್ನು ನೀಡಿದ್ದಾರೆ.

ವಿಶ್ವ ಚಾನಲ್ಸ್ ದಿನದ ನಂತರ ಭೂಮಾತೆಯ ಮೇಲೆ ಹೆಚ್ಚು ಪ್ರೀತಿ ಮತ್ತು ಶಾಂತಿ ನೆಲೆಸಲಿ.

**ಮಾನಸ ಫೌಂಡೇಶನ್ (ರಿ)**

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.

ಫೋನ್ : (080) 2846 5280, 99000 75280 (10 AM to 4 PM)

ಇ–ಮೇಲ್ : info@lightagemasters.com info@lightchannels.com

ವೆಬ್‌ಸೈಟ್ : www.lightagemasters.com www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

**ಬೆಂಗಳೂರು**

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ,
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ,
ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೆಕರ್

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ,
8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗ ವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವ ಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ-ಮೇಲ್ info@lightagemasters.com ಗೆ ದಯವಿಟ್ಟು ಬರೆಯಿರಿ.



ಮಹಾರಾಷ್ಟ್ರದ ಸಾಂಗ್ಲಿಯಲ್ಲಿನ ಜೀಜಾಮಾತಾ ಮಹಿಳಾ ಮಂಡಲಿಯ ಸದಸ್ಯರು ಡಿಸೆಂಬರ್ 21, 2015 ರಂದು ಲೈಟ್ ಚಾನಲಿಂಗ್ ಮಾಡುತ್ತಿರುವುದು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಯಾರಾದರೂ ನಮಗೆ ನೋವನ್ನುಂಟು ಮಾಡಿದರೆ, ನಮ್ಮ ಆಲೋಚನಾ ಮಟ್ಟವನ್ನು, ಪ್ರತಿಕ್ರಿಯಿಸುವ ಮಟ್ಟವನ್ನು ನಾವು ಮೇಲಕ್ಕೇರಿಸಬೇಕು. ಕ್ಷಮಿಸುವುದು ಸುಲಭವಲ್ಲ. ಕ್ಷಮಿಸಿದಾಗ ನೀವು ಆಧ್ಯಾತ್ಮಿಕವಾಗಿ ಬೆಳೆಯುವಿರಿ. ಇದು, ನೀವು ಕ್ಷಮಿಸಿದ ವ್ಯಕ್ತಿಯ ಮನಸ್ಸನ್ನು ಕೂಡ ಮುಟ್ಟುತ್ತದೆ.
- ನಾಯಕನಾದವನು ಇಡೀ ಪ್ರಪಂಚದ ಬಗ್ಗೆ ಕನಸು ಕಾಣುತ್ತಾನೆ ಹಾಗೂ ಅದನ್ನು ಸಾಕಾರಗೊಳಿಸಲು ಪ್ರಯತ್ನಿಸುತ್ತಾನೆ, ಆ ಕನಸಿನಂತೆ ಬಾಳಲು ಪ್ರಯತ್ನಿಸುತ್ತಾನೆ ಹಾಗೂ ಅದಕ್ಕಾಗಿ ಶ್ರಮಿಸುತ್ತಾನೆ. ಇತರರೂ ಕನಸು ಕಾಣಲು ಹಾಗೂ ಅವರ ಕನಸಿನಂತೆ ಬಾಳಲು ಉತ್ತೇಜಿಸುತ್ತಾನೆ.
- ನಿಜವಾದ ನಾಯಕನೊಬ್ಬನಲ್ಲಿ ಬಹಳ ಧೈರ್ಯ ಹಾಗೂ ಸೃಜನಶೀಲತೆ ಇರುತ್ತದೆ ಹಾಗೂ ಅವನು ನುಡಿದಂತೆ ನಡೆಯುತ್ತಾನೆ.
- ಕೋಪವು ಕೇವಲ ನಮ್ಮ ಶರೀರದ ಮೇಲೆ ಮಾತ್ರವಲ್ಲದೆ ನಮ್ಮ ಮನಸ್ಸು ಮತ್ತು ಬುದ್ಧಿಯ ಮೇಲೂ ಪರಿಣಾಮ ಬೀರುತ್ತದೆ. ಕೆಲವು ಸಲ ನಮ್ಮ ಶರೀರದಲ್ಲಿನ ಕೋಶಗಳು, ವಿಶೇಷವಾಗಿ ನಮ್ಮ ಮಿದುಳಿನ ಕೋಶಗಳು ಹಾಳಾಗುತ್ತವೆ.
- ನಾವು ಬೆಳಕನ್ನು ಅನುಭವಿಸಿದಾಗ ದೇವರ ಜೊತೆ ಸಂಪರ್ಕ ಹೊಂದುತ್ತೇವೆ. ಆಗ ನಮಗೆ ಅವನ ಎಲ್ಲಾ ಶಕ್ತಿ, ವಿವೇಕ ಹಾಗೂ ಪ್ರೀತಿಗೆ ಪ್ರವೇಶಾವಕಾಶವಿರುತ್ತದೆ.
- ನಾವು ಬೆಳಕನ್ನು ಅನುಭವಿಸಿದಾಗ ನಮ್ಮಲ್ಲಿ ಮತ್ತು ನಮ್ಮ ಸುತ್ತಲೂ ಪ್ರೀತಿ ಹಾಗೂ ಬೆಳಕು ಇರುತ್ತದೆ. ಸಂಪೂರ್ಣವಾಗಿ ಶಾಂತಿ ಇರುತ್ತದೆ ಹಾಗೂ ಘರ್ಷಣೆ ಅಥವಾ ಸಮಸ್ಯೆಗಳಿರುವುದಿಲ್ಲ.
- ನಮ್ಮ ನಿಜಸ್ವರೂಪವೇ ಬೆಳಕಿನ ಕಣವಾದ ಆತ್ಮ. ಇದು ಪರಿಶುದ್ಧ ಹಾಗೂ ದೋಷರಹಿತವಾದುದಾಗಿದ್ದು ಯಾವಾಗಲೂ ಬೆಳಕಿನ ಜೊತೆ, ದೇವರ ಜೊತೆ ಶ್ರುತಿಗೊಂಡಿರುತ್ತದೆ. ಈ ನಿಜಸ್ವರೂಪ ಯಾವಾಗಲೂ ಪ್ರೀತಿ, ಪ್ರಮಾಣಿಕತೆ ಹಾಗೂ ವೈರಾಗ್ಯವನ್ನು ಹೊರಸೂಸುತ್ತಿರುತ್ತದೆ.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 5060 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 27.62 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## 6ನೇ ವಿಶ್ವ ಚಾನಲ್ಸ್ ದಿನ

**ಮನೋಜ್ ಕುಮಾರ್ ಚೋಪ್ರ; ಅನು: ವರ್ಷಾ ದೀಪಕ್**

ಪ್ರತಿಯೊಬ್ಬ ಲೈಟ್ ಚಾನಲ್ ಕಾರ್ಯಕರ್ತನಿಗೂ, 'ವಿಶ್ವ ಚಾನಲ್ಸ್ ದಿನ'ವು ಒಂದು ಅವಿಸ್ಮರಣೀಯ ದಿನವಾಗಿದೆ. ಅವರಿಗೆ ಅದೊಂದು ತಮ್ಮ ಜೀವನದ ಹರ್ಷಭರಿತ ಮತ್ತು ಅತ್ಯಮೂಲ್ಯ ಕ್ಷಣಗಳ ದಿನವಾಗಿದೆ. ನಮ್ಮ ಕಾರ್ಯಕರ್ತರು ಇಡೀ ಜನವರಿ ತಿಂಗಳನ್ನು ಈ ಮಹೋನ್ನತ ಆಚರಣೆಯ ಪೂರ್ವಸಿದ್ಧತೆಯಲ್ಲಿ ಕಳೆದರು. ಈ ವಿಶೇಷ ಆಚರಣೆಗೆ ಎಲ್ಲಾ ಕಾರ್ಯಕರ್ತರೂ ತಮ್ಮದೇ ಆದ ವಿಶೇಷವಾದ ರೀತಿಯಲ್ಲಿ ಕೊಡುಗೆಯನ್ನು ನೀಡಬಯಸಿದ್ದರು. ಅವರಲ್ಲಿ ಪ್ರತಿಯೊಬ್ಬರೂ ಈ ಅವಕಾಶವನ್ನು ಸಂಪೂರ್ಣವಾಗಿ ಬಳಸಿಕೊಳ್ಳ ಬಯಸಿದ್ದರು.

ಆ ದಿನವು ನಮ್ಮ ಪ್ರೀತಿಯ ಮಾಸ್ಟರ್ ಮಹರ್ಷಿ ಅಮರರವರೆಡೆಗಿನ ಪ್ರೀತಿ ಮತ್ತು ಭಾವುಕತೆಯ ದಿನವಾಗಿದೆ.

ತಂಡಗಳೊಳಗಿನ "ಏಕತೆ" ಯು 'ಲೈಟ್ ಚಾನಲ್ಸ್ ವಿಶ್ವ ಸಂಚಲನ'ದ ಯಶಸ್ಸಿಗೆ ಕೀಲಿಕೈಯಾಗಿದೆ ಎಂದು ಸದಾಕಾಲ ನಂಬಿದ್ದೇನೆ. ನಾವು ಯಾವುದೇ ಒಂದು ಮೈಲಿಗಲ್ಲನ್ನು ತಲುಪಿದ್ದರೆ ಅದಕ್ಕೆ ನಮ್ಮ ತಂಡದ ಏಕತೆ ಮತ್ತು ಮಾಸ್ಟರ್‌ಗಳ ಅನುಗ್ರಹಗಳೇ ಕಾರಣ. ಏಕತೆಯು ಭಯವನ್ನು ನಿವಾರಿಸಿ, ಧೈರ್ಯವನ್ನು ಹೆಚ್ಚಿಸುತ್ತದೆ. ಧೈರ್ಯ ಮತ್ತು ಆತ್ಮವಿಶ್ವಾಸದಿಂದ ತಂಡವು ಏನನ್ನಾದರೂ ಸಾಧಿಸಲು ನಿರ್ಧರಿಸಿದರೆ, ಅದು ಅಸಾಧ್ಯವಾದುದನ್ನು ಕೂಡಾ ಸಾಧಿಸಬಹುದು.

2015 ನೇ ವರ್ಷದಲ್ಲಿ ನಮ್ಮ ಅನೇಕ ಕಾರ್ಯಕರ್ತರು ವೈಯಕ್ತಿಕ ಮತ್ತು ವೃತ್ತಿಪರ ಸವಾಲುಗಳೊಂದಿಗೆ, ಆರೋಗ್ಯದ ಸಮಸ್ಯೆಗಳನ್ನೂ ಎದುರಿಸುತ್ತಿದ್ದರು. ನವೆಂಬರ್ ತಿಂಗಳ ಕೊನೆಯವರೆಗೆ ಹೆಚ್ಚಿನ ಕೆಲಸ ಮಾಡಲು ನಮಗೆ ಸಾಧ್ಯವಾಗಲಿಲ್ಲ. ಆದರೆ, ವಿಶ್ವ ಸಂಚಲನ ದಿನದ ಕೇವಲ 21ದಿನಗಳ ಮೊದಲು, ನಾವು ನಮ್ಮ ತ್ರೈಮಾಸಿಕ ಮೀಟಿಂಗ್‌ಗಾಗಿ ಸೇರಿದಾಗ, ಅಲ್ಲಿ ಅನಿರೀಕ್ಷಿತ ಚೈತನ್ಯಗಳ ಏರಿಕೆಯಾಯಿತು. ನಮ್ಮ ಮಾಸ್ಟರ್‌ಗಳು ನಮ್ಮನ್ನು ಉನ್ನತ ಮಟ್ಟಕ್ಕೆ ಸ್ಥಳಾಂತರಿಸಿದಂತೆ ನಮಗನಿಸಿತು. ಎಲ್ಲಾ ತಂಡಗಳು ತಮ್ಮ ವೇಗವನ್ನು ಹೆಚ್ಚಿಸಿ, ಈ ಮಹೋನ್ನತ ದಿನಕ್ಕೆ ಸಿದ್ಧಗೊಳ್ಳಲು ಆರಂಭಿಸಿದರು.

ಪ್ರತಿ ತಂಡವೂ ಹಗಲು ರಾತ್ರಿ ಕೆಲಸ ಮಾಡಿ, ಒಂದು ನಿಖರವಾದ ಯೋಜನೆಯನ್ನು ತಯಾರಿಸಿದರು. ಹಲವು ಕಾರ್ಯಕರ್ತರು ತಮ್ಮ ವೈಯಕ್ತಿಕ ಸಮಯವನ್ನು ತ್ಯಾಗಮಾಡಿ, ತಮ್ಮ ಸಹ ಕಾರ್ಯಕರ್ತರಿಗೆ ಕೊಟ್ಟಿರುವ ಕೆಲಸವನ್ನು ಪೂರ್ಣಗೊಳಿಸಲು ಸಹಕರಿಸಿದರು. ಕೆಲವು ಕಾರ್ಯಕರ್ತರು ನೂರಾರು ಕಿಲೋಮೀಟರ್ ಪ್ರಯಾಣಿಸಿ, ದೂರದ ಶಾಲೆಗಳನ್ನು ಕೂಡಾ ತಲುಪಿದರು ಮತ್ತು ಈ ವಿಶ್ವಾತ್ಮಕ ಕಾರ್ಯಕ್ಕಾಗಿ ಇನ್ನೂ ಕೆಲವರು ರಜೆ ಹಾಕಿ ತಮ್ಮ ಅವಿಶ್ರಾಂತ ಕೆಲಸಗಳಿಂದ ಬಿಡುವು ಮಾಡಿಕೊಂಡರು. ನಮ್ಮ ಕಾರ್ಯಕರ್ತರು ನೇತಾರರಂತೆ ಕೆಲಸಮಾಡಿ, ತಮ್ಮ ಯೋಜನೆಯನ್ನು ನಿಗದಿತ ಸಮಯಕ್ಕಿಂತಲೂ ಮುಂಚೆಯೇ ಪೂರ್ಣಗೊಳಿಸಿದರು.

ನಮ್ಮ ಪ್ರಾದೇಶಿಕ ಸಂಘಟಕರು ಆಪ್ತ ಸಲಹೆಗಾರರಂತಿದ್ದರು. ಅವರು ಅನೇಕ ಅಡೆತಡೆಗಳನ್ನು ದಾಟಿದರು, ಕಠಿಣ ಪರಿಸ್ಥಿತಿಗಳಲ್ಲೂ ಶಾಂತವಾಗಿದ್ದರು. ಅವರು ತಮ್ಮ ತಂಡದ ಕಾರ್ಯಕರ್ತರಿಗೆ ಅನುಕರಣೀಯರಾಗಿದ್ದರು.

ವಿಶ್ವ ಚಾನಲ್ಸ್ ದಿನದಂದು, ನಮ್ಮ ದಿನವು ಬೆಳಿಗ್ಗೆ 6 ಗಂಟೆಗೆ ಮಹರ್ಷಿ ಅಮರರವರಿಗೆ ಗೌರವಗಳನ್ನು ಅರ್ಪಿಸುವುದರೊಂದಿಗೆ ಆರಂಭವಾಯಿತು, ನಂತರ 7 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಿದೆವು. ಇಡೀ ದಿನ ಒಂದು ಅನುಗ್ರಹದಂತಿತ್ತು. ಪ್ರತಿಯೊಬ್ಬರೂ ವಿಶೇಷ ಚೈತನ್ಯಗಳನ್ನು ಮತ್ತು ಅನುಗ್ರಹವನ್ನು ದಿನವಿಡೀ ಅನುಭವಿಸಿದರು. ನೂರಾರು ಶಾಲೆಗಳು ಸ್ವಯಂಪ್ರೇರಿತವಾಗಿ ಈ ಲೈಟ್ ಚಾನಲಿಂಗ್‌ನಲ್ಲಿ ನಮ್ಮೊಡನೆ ಭಾಗವಹಿಸಿದರು. ಕೆಲವು ನಿವಾಸಿಗಳ ತಂಡಗಳೂ ಲೈಟ್ ಚಾನಲಿಂಗ್ ಮಾಡುವ ಮೂಲಕ ನಮ್ಮೊಂದಿಗೆ ಭಾಗವಹಿಸಿದ್ದರು. ಮಾಸ್ಟರ್‌ಗಳಿಗೆ ಧನ್ಯವಾದಗಳನ್ನು ಅರ್ಪಿಸಿದ ನಂತರ 7 ನಿಮಿಷಗಳ ಕಾಲ ಚಾನಲಿಂಗ್ ಮಾಡುವ ಮೂಲಕ ಆ ದಿನ ಕೊನೆಗೊಂಡಿತು.

6 ನೇ ವಿಶ್ವ ಚಾನಲ್ಸ್ ದಿನವು ಅತ್ಯಂತ ಸಫಲವಾಯಿತು. ಒಂದು ಮಿಲಿಯನ್‌ಗೂ ಹೆಚ್ಚಿನ ಮಕ್ಕಳು 2370 ಶಾಲೆಗಳಲ್ಲಿ ಲೈಟ್ ಚಾನಲ್ ಮಾಡಿದರು. ಅಂದು ಹೃದಯಪೂರ್ವಕವಾಗಿ ನಮ್ಮ ಜೊತೆಗೂಡಿದ ಶಾಲಾ ಆಡಳಿತ ಮಂಡಳಿಯವರನ್ನು ಮತ್ತು ಶಾಲಾ ಮಕ್ಕಳನ್ನು ಅಭಿವಂದಿಸಲು ನನ್ನಲ್ಲಿ ಪದಗಳೇ ಇಲ್ಲ.

ಅಂದು ಕೆಳತಂದಿರುವ ಬೆಳಕು ನಮ್ಮ ಭೂಮಿಯ ಮೇಲೆ ಹೆಚ್ಚು ಶಾಂತಿಯನ್ನು ಮತ್ತು ಮಿಲಿಯಾಂತರ ಮುಖಗಳಲ್ಲಿ ನಗುವನ್ನು ತರಲೆಂದು ಹಾರೈಸುತ್ತೇನೆ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಯಾವುದಾದರೊಂದು ಲೈಟ್ ಚಾನಲಿಂಗ್ ಕೇಂದ್ರದಲ್ಲಿ ವಾರಕ್ಕೆ ಒಮ್ಮೆ ಲೈಟ್ ಚಾನಲ್ ಮಾಡಲು ದಯವಿಟ್ಟು ನಮ್ಮ ಜೊತೆಗೂಡಿ ಹಾಗೂ ಶಾಂತಿ ಮತ್ತು ಪ್ರೀತಿಯ ಕಂಪನಗಳನ್ನು ಹರಡಲು ಮತ್ತು ಬಲಗೊಳಿಸಲು ನಮಗೆ ಸಹಾಯಮಾಡಿ. ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ದಯವಿಟ್ಟು ಈ ವಾರ್ತಾಪತ್ರವನ್ನು ಹಂಚಿಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್ ಸೈಟ್ www.lightchannels.com ನಿಂದ ಡೌನ್ ಲೋಡ್ (download) ಮಾಡಿಕೊಳ್ಳಬಹುದು.

### ಸೋಲಾಪೂರ್

ಸೋಮವಾರ ಮತ್ತು ಗುರುವಾರ
(ಸಂಜೆ 7:00 - 7:15)
ಬಾಲಗಣೇಶ್ ಮಂದಿರ, ಬುಶರ್ ಪೇಠ್,
ಮೊಹೋಲ್
☎ 09860967066, ಶ್ರೀ ವಿವೇಕಾನಂದ ಸ್ವಾಮಿ
☎ 09970800279, ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ

ಭಾನುವಾರ (ಬೆಳಿಗ್ಗೆ 10:00 -10:30)
ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4ನೇ ಸೆಕ್ಟರ್, ಕೆ.ಕೆ. ನಗರ
☎ 9444880409, ಶ್ರೀಮತಿ ರಾಜಲಕ್ಷ್ಮಿ ಆರ್.

### ಪುಣೆ

ಶನಿವಾರ (ಸಂಜೆ 6:30 - 7:00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169, ಶ್ರೀ ಆಶುತೋಶ್ ನವನ್‌ಗುಲ್

### ಮೀರಜ್

ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಶ್ ನಗರ ಪೋಸ್ಟ್
☎ 9822421463, ಶ್ರೀ ಮಹಾಜನ್

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು "Experiences of Light Channels" ಎಂಬ ಪುಸ್ತಕದಲ್ಲಿ ಸಂಗ್ರಹಿಸ ಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್ ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಲೈಟ್ ಚಾನಲಿಂಗ್ ಮಾಡಲು ಕಣ್ಣು ಮುಚ್ಚಿದನಂತರ ನಾನೊಂದು ಹೊಸ ಜಗತ್ತಿನಲ್ಲಿ ಇದ್ದಂತೆ ಅನಿಸಿತು. ನಾನು ಕಣ್ಣು ತೆರೆದಾಗ ಹೊಸದಾದ ಬೇರೊಂದು ಜಗತ್ತನ್ನು ನೋಡಿದೆ.

–ವಿಷ್ಣು ಪಿ, 6ನೇ ತರಗತಿ, ಆರ್.ಎಮ್.ಎಸ್. ಇಂಟರ್‌ನ್ಯಾಷನಲ್ ಸ್ಕೂಲ್, ಕನಕಪುರ ರಸ್ತೆ, ಬೆಂಗಳೂರು

ಲೈಟ್ ಚಾನಲಿಂಗ್ ಮಾಡಲು ಕಣ್ಣು ಮುಚ್ಚಿದ ನಂತರ ನನಗೆ ಶಾಂತಿ ಮತ್ತು ಆರಾಮವಾಗಿರುವಂತೆ ಅನಿಸಿತು.

–ಪಾಂಡುರಂಗ್, 6ನೇ ತರಗತಿ, ಆರ್.ಎಮ್.ಎಸ್. ಇಂಟರ್‌ನ್ಯಾಷನಲ್ ಸ್ಕೂಲ್, ಕನಕಪುರ ರಸ್ತೆ, ಬೆಂಗಳೂರು

ಲೈಟ್ ಚಾನಲಿಂಗ್ ಮಾಡಿದನಂತರ ಕಣ್ಣು ತೆರೆದಾಗ ನಾನು ಉಲ್ಲಾಸ ಮತ್ತು ಆಹ್ಲಾದತೆಯನ್ನು ಅನುಭವಿಸಿದೆ. ಬೆಳಕನ್ನು ಕೂಡ ನಾನು ನೋಡಿದೆ.

–ನೇಹಶ್ರೀ, 6ನೇ ತರಗತಿ, ಆರ್.ಎಮ್.ಎಸ್. ಇಂಟರ್‌ನ್ಯಾಷನಲ್ ಸ್ಕೂಲ್, ಕನಕಪುರ ರಸ್ತೆ, ಬೆಂಗಳೂರು

ಲೈಟ್ ಚಾನಲಿಂಗ್ ಸೆಷನ್ ಸಮಯದಲ್ಲಿ ಹೆಚ್ಚಿನ ಬೆಳಕು ನನ್ನ ಒಳಗೆ ಹಾಗೂ ಎಲ್ಲಾ ಕಡೆಗಳಿಗೆ ಹರಡುತ್ತಿರುವುದನ್ನು ನೋಡಲು ಮತ್ತು ಅನುಭವಿಸಲು ನನಗೆ ಸಾಧ್ಯವಾಯಿತು. ನಾನು ಯಥೇಚ್ಛವಾದ ಬೆಳಕನ್ನು ಅನುಭವಿಸಿದೆ.

–ಅಮೀನ ಚಂದ, 7ನೇ ತರಗತಿ, ಲಾರ್ಡ್ಸ್ ಸ್ಕೂಲ್, ಹುಳಿಮಾವು, ಬೆಂಗಳೂರು

ಲೈಟ್ ಚಾನಲಿಂಗ್ ಅಭ್ಯಾಸ ಮಾಡಲು ಪ್ರಾರಂಭಿಸಿದ ನಂತರ, ಕೆಲವು ಮಕ್ಕಳು ಸುಧಾರಣೆಯಾಗಿದ್ದಾರೆ ಹಾಗೂ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸದೇ ಇದ್ದ ಕೆಲವು ಮಕ್ಕಳು ಈಗ ಯಾವುದೇ ಅಂಜಿಕೆ ಇಲ್ಲದೆ ವ್ಯಕ್ತಪಡಿಸುತ್ತಿದ್ದಾರೆ. ಕೆಲವು ವಿದ್ಯಾರ್ಥಿಗಳ ಕೌಟುಂಬಿಕ ಪರಿಸ್ಥಿತಿ ಕ್ರಮೇಣವಾಗಿ ಉತ್ತಮಗೊಂಡಿದೆ. ತಮ್ಮ ಮಕ್ಕಳನ್ನು ಅಲಕ್ಷಿಸಿದ್ದ ಕೆಲವು ಪೋಷಕರು, ಈಗ ಅವರ ವಿದ್ಯಾಭ್ಯಾಸದಲ್ಲಿ ಆಸಕ್ತಿವಹಿಸುತ್ತಿದ್ದಾರೆ ಹಾಗೂ ಪೋಷಕರ ಮತ್ತು ಶಿಕ್ಷಕರ ಸಭೆಗಳಲ್ಲಿ ನಿಯತವಾಗಿ ಭಾಗವಹಿಸುತ್ತಿದ್ದಾರೆ.

–ಪ್ರಿನ್ಸಿಪಾಲರು, ಲಾರ್ಡ್ಸ್ ಸ್ಕೂಲ್, ಹುಳಿಮಾವು, ಬೆಂಗಳೂರು

ನಮ್ಮ ಶಾಲೆಯ ಅಸೆಂಬ್ಲಿಯಲ್ಲಿ ಒಬ್ಬ ವಿದ್ಯಾರ್ಥಿ ಧ್ವನಿವರ್ಧಕದ ಹತ್ತಿರ ಬಂದು ತಾನು ನಿಯತವಾಗಿ ಲೈಟ್ ಚಾನಲಿಂಗ್ ಮಾಡುತ್ತಿರುವುದರ ಪರಿಣಾಮವಾಗಿ ಒಂಭತ್ತನೇ ತರಗತಿಯಲ್ಲಿ 85% ಅಂಕಗಳನ್ನು ಪಡೆದಿದ್ದೇನೆ ಎಂದು ಹೇಳಿದನು. ಆ ಹುಡುಗ ಬಂದು ಮಾತನಾಡಿದುದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಸಾಮಾನ್ಯವಾಗಿ ವಿದ್ಯಾರ್ಥಿಗಳು ಲೈಟ್ ಚಾನಲಿಂಗ್ ಸೆಷನ್ ನಡೆಯುವ ದಿನದಂದು ಮಾತ್ರ ಅಸೆಂಬ್ಲಿಯಲ್ಲಿ ಮಾತನಾಡುತ್ತಾರೆ. ಬೇರೆ ದಿನದಲ್ಲಿ ಈ ರೀತಿಯಾಗಿ ವಿದ್ಯಾರ್ಥಿಯೊಬ್ಬ ಅಸೆಂಬ್ಲಿಯಲ್ಲಿ ಮಾತನಾಡಿದ್ದು ಅಪರೂಪವೆನಿಸಿತು.

– ಮುಖ್ಯೋಪಾಧ್ಯಾಯರು, ರೌಂಡ್ ಟೇಬಲ್ ಸ್ಕೂಲ್, ರೂಪೇನ ಅಗ್ರಹಾರ, ಬೆಂಗಳೂರು

ನನಗೆ ಎರಡು ದಿನಗಳಿಂದ ತಲೆ ನೋವಿತ್ತು. ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಭಾಗವಹಿಸಿದ ನಂತರ ತಲೆ ನೋವು ಕಡಿಮೆ ಆಯಿತು. ನನಗೆ ತುಂಬಾ ಸಂತೋಷವಾಯಿತು. ಪುನಃ, ಆ ರಾತ್ರಿ ನನಗೆ ವಿಪರೀತ ತಲೆ ನೋವು ಬಂತು. ಮತ್ತೆ ಅದೇ ತಂತ್ರವನ್ನು ಅಭ್ಯಾಸ ಮಾಡಿದೆ, ನೋವು ಹೊರಟು ಹೋಯಿತು. ನನ್ನಲ್ಲಿ ಯಾವುದೇ ನೋವುಗಳು ಕಾಣಿಸಿಕೊಂಡಾಗ, ಲೈಟ್ ಚಾನಲಿಂಗ್ ಅಭ್ಯಾಸ ಮಾಡಬೇಕೆಂದು ಈಗ ನನಗೆ ಮನವರಿಕೆಯಾಗಿದೆ.

–ಬೃಂದಾ, ಶಿಕ್ಷಕಿ, ಭಾರತೀಯ ವಿದ್ಯಾನಿಕೇತನ್ ಹೈಸ್ಕೂಲ್, ದೇವಸಂದ್ರ

**ವಿಶ್ವ ಚಾನಲ್ಸ್ ದಿನವಾದ**
**ಫೆಬ್ರುವರಿ 1, 2016ರಂದು**
**1 ಮಿಲಿಯನ್‌ಗೂ ಹೆಚ್ಚು**
**ಜನರು ಬೆಳಕನ್ನು ಚಾನಲ್ ಮಾಡಿದರು**

## ನಿಮಗೆಲ್ಲರಿಗೂ ವಂದನೆಗಳು

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು : ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ